ಶ್ರೀ ಎ. ಲಕ್ಷ್ಮೀಸಾಗರ್ (ಶಿಕ್ಷಣ ಸಚಿವರ ಪರವಾಗಿ).— ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಸರ್ಕಾರಿ ಕಿರಿಯ ಮಹಾ ವಿದ್ಯಾಲಯ ಬೆಳ್ಳಾರೆ ಮತ್ತು ಸರ್ಕಾರಿ ಕಿರಿಯ ಕಾಲೇಜು ಸುಳ್ಯ ಈ ಕಾಲೇಜುಗಳಲ್ಲಿ ಸಿ ಪಿ ಎಡ್ ಪಡೆದ ದೈಹಿಕ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಮೇಲ್ಕಂಡ ಕಾಲೇಜುಗಳು ಸಂಯುಕ್ತ ಕಿರಿಯ ಕಾಲೇಜಂಗಳಾದುದರಿಂದ ಪ್ರೌಢಶಾಲೆ ಹಂತದಲ್ಲಿ ದೈಹಿಕ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಈ ಕಾಲೇಜುಗಳಿಗೆ ಬಿ ಪಿ ಎಡ್ ತರಬೇತಿ ಹೊಂದಿದ ಶಿಕ್ಷಕರುಗಳು ಹುದ್ದೆಯನ್ನು (ಗ್ರೇಡ್-೧) ಮಂಜೂರು ಮಾಡಬೇಕಾಗಿದೆ. ಇದರ ಬಗ್ಗೆ ಮಾಹಿ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

೨-೦೦ ಪಿ. ಎಂ.

## ಬಿಜಾಪುರ ಜಿಲ್ಲೆಯ ಜಮಖಂಡಿ, ಇಂಡಿ, ಸಿಂಧಗಿ ತಾಲ್ಲೂಕುಗಳ ರೈತರ ಬಾವಿಗಳಿಗೆ ವಿದ್ಯುತ್ ಒದಗಿಸುವುದಂ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) — ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಜಮಖಂಡಿ, ಇಂಡಿ, ಸಿಂಧಗಿ ಮತ್ತು ಇತರ ತಾಲ್ಲೂಕುಗಳಲ್ಲಿ ೪-೫ ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿ ಅಲ್ಲಿಯ ರೈತರು ಬಾವಿಗಳಲ್ಲಿ ನೀರು ಪಡೆಯದೆ ಇದ್ದು ವಿದ್ಯುತ್ ಉಪಯೋಗಿಸಿಲ್ಲದಿದ್ದರೂ ಸ್ವಾವಿರಾರು ರೂಪಾಯಿಗಳಷ್ಟು ಬಿಲ್ಲುಗಳನ್ನು ವಿದ್ಯುತ್ ಇಲಾಖೆ ಕಳುಹಿಸಿದೆ. ಕಳೆದ ಒಂದು ವರ್ಷದಿಂದ ಆ ಭಾಗದ ರೈತರು ಬಡ್ಡಿ ಮತ್ತು ದಂಡದ ಬಡ್ಡಿ ಸೇರಿಸಿ ಒಬ್ಬೊಬ್ಬ ರೈತನಿಗೆ ಕೆ.ಇ.ಬಿ. ಯಿಂದ ಸಾವಿರಾರು ರೂಪಾಯಿಗಳ ಬಿಲ್ಲನ್ನು ಕಳುಹಿಸಿದ್ದು ಈಗ ಅಲ್ಲಿ ಬಾವಿಗಳಲ್ಲಿ ನೀರಿದ್ದು ವಿದ್ಯುತ್ ಉಪಯೋಗಿಸಿ ಅಲ್ಪ ಸ್ವಲ್ಪ ಬೆಳೆ ಬೆಳೆಯುವ ರೈತರಿಗೆ ಈಗ ಕೆ.ಇ.ಬಿ.ಯವರು ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ನಿಲ್ಲಿಸಿರುತ್ತಾರೆ. ಇದರಿಂದ ಕೋಟ್ಯಾಂತರ ರೂಪಾಯಿ ಬೆಳೆ ನಾಶವಾಗುವುದರಿಂದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಿ ಹಳೆಯ ವಿದ್ಯುತ್ ಬಿಲ್ ವಜಾ ಮಾಡಿ ಈಗ ನಿಲ್ಲಿಸಿರುವ ವಿದ್ಯುತ್ ಸರಬರಾಜು ಪೂರೈಸುವಂತೆ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.— ಈಗ ವಿಧೇಯಕಗಳನ್ನು ತೆಗೆದುಕೊಳ್ಳಿರಿ.

## ಶಾಸನ ರಚನಾ ಕಾರ್ಯ ಕಲಾಪಗಳು

## ೧೯೮೯ನೇ ಇಸವಿಯ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ೧೯೮೯ನೇ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ೧೯೮೯ನೇ ಇಸವಿಯ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕದಲ್ಲಿ ಮುಖ್ಯವಾದ ವಿಷಯ ಏನು ಎಂದರೆ, ಭೂ ಸ್ವಾಧೀನ ಮಾಡುವ ಪ್ರಿಲಿಮಿನರಿ ನೋಟಿಫಿಕೇಷನ್ ಮತ್ತು ಫೈನಲ್ ನೋಟಿಫಿ ಕೇಷನ್ ಕೊಡತಕ್ಕ ಸಮಯದಲ್ಲಿ ಕಾನೂನು ಪ್ರಕಾರ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಅವುಗಳಿಗೆ ಸಂಬಂಧಪಟ್ಟಂತೆ ಎಲ್ಲಾ ವಿವರಗಳನ್ನು ಪತ್ರಿಕೆಗಳಲ್ಲಿ ಜಾಹಿರಾತು ಮಾಡಬೇಕೆಂದು ಇದೆ. ಇದರಲ್ಲಿ ವಿಪರ್ಯಾಸ ಏನೆಂದರೆ, ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಏನುಪರಿಹಾರ ಕೊಡತ್ತೇವೆಯೋ ಅದಕ್ಕಿಂತ ಹೆಚ್ಚು ಹಣವನ್ನು ಪತ್ರಿಕೆಗಳಲ್ಲಿ ಇದರ ಬಗ್ಗೆ ಜಾಹಿರಾತು ಕೊಡುವುದಕ್ಕೆ ವಿನಿಯೋಗಿಸುತ್ತಿತ್ತು.